**ಪಾಠ–2** **ಏಪ್ರಿಲ್ 2–8**

# ಬೀಳುವಿಕೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಆ.ಕಾಂಡ 3, 2 ಕೊರಿಂಥ 11:3, ಪ್ರಕಟಣೆ 12:7–9, ಯೋಹಾನ 8:44, ರೋಮ 16:20, ಇಬ್ರಿ 2:14, 1 ತಿಮೊಥೆ 2:14,15.

**ಸ್ಮರಣವಾಕ್ಯ : "ನಿನಗೂ ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವುದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ (ಆ.ಕಾಂಡ 3:15).**

ದೇವರು ನಮ್ಮ ಮೊದಲ ತಂದೆತಾಯಿಗಳಿಗೆ ಏದೇನಿನಲ್ಲಿ ಎಲ್ಲದರ ಜೊತೆಗೆ ಒಂದು ಎಚ್ಚರಿಕೆಯನ್ನು ಸಹಾ ಕೊಟ್ಟನು. "ನೀನು ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣನ್ನು ಯಥೇಚ್ಛವಾಗಿ ತಿನ್ನಬಹುದು; ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇ ಹೋಗುವಿ ಎಂದು ವಿಧಿಸಿದನು" (ಆ.ಕಾಂಡ 2:16,17). ಮನುಷ್ಯನು ಒಳ್ಳೆಯದನ್ನು ಅರಿತು ಕೊಂಡಾಗ್ಯು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಹಣ್ಣನ್ನು ಮಾತ್ರ ತಿನ್ನಬಾರದೆಂದು ಏಕೆ ಹೇಳಿದನು ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಖಂಡಿತವಾಗಿಯೂ ನಾವು ಯಾಕೆ ತಿನ್ನಬಾರದಾಗಿತ್ತು ಎಂಬುದನ್ನು ಅರ್ಥ ಮಾಡಿಕೊಳ್ಳಬಲ್ಲವರಾಗಿದ್ದೇವೆ ಅಲ್ಲವೆ?

ಮಾತ್ರವಲ್ಲದೆ ಅವಿಧೇಯರಾದರೆ ತಿಂದ ದಿವಸ ಸತ್ತೇ ಹೋಗುವಿ ಮರಣದ ಬೆದರಿಕೆಯನ್ನು ಸಹಾ ಜೊತೆಗಿಟ್ಟು ಎಚ್ಚರಿಕೆ ನೀಡಿದ್ದನು (ಆ.ಕಾಂಡ 2:17)

* **ಈ ವಾರದ ಪಾಠವನ್ನು ಏಪ್ರಿಲ್ 9ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.**

ನೆರವೇರಿತು. ಅವರು ಹಣ್ಣನ್ನು ತಿಂದ ಮೇಲೆ ಅದನ್ನು ಮತ್ತೆ ತಿನ್ನದಂತೆ ನಿಷೇಧಿಸಲ್ಪಟ್ಟರು ಮತ್ತು ತೋಟದಿಂದ ಹೊರಕೆ ದೊಬ್ಬಲ್ಪಟ್ಟರು (ಆ.ಕಾಂಡ 3:22) ಮತ್ತು ಪಾಪಿಗಳಾಗಿ ನಿತ್ಯಕ್ಕೂ ಜೀವಿಸಬಾರದೆಂದು ಜೀವವೃಕ್ಷದ ಫಲವನ್ನು ತಿನ್ನದಂತೆ ಹೊರಹಾಕಲ್ಪಟ್ಟರು (ಆ.ಕಾಂಡ 3:24).

"ಅದೇನೆ ಇರಲಿ, ಈ ದುರಂತದ ನಡುವೆಯೂ ನಿರೀಕ್ಷೆಯು ಕೊಡಲ್ಪಟ್ಟಿತೆಂಬುದನ್ನು ಆ.ಕಾಂಡ 3:15ರಲ್ಲಿ ಕಾಣುತ್ತೇವೆ. ಸತ್ಯವೇದದಲ್ಲಿ ಸಿಗುವ ಮೊಟ್ಟಮೊದಲ ವಾಗ್ದಾನವುಳ್ಳ ಸುವಾರ್ತೆಯ ವಚನವು ಇದಾಗಿದೆ. ಮನುಷ್ಯನು ಪಾಪದಲ್ಲಿ ಬಿದ್ದುಹೋದಾಗ್ಯೂ ನಾವೆಲ್ಲರೂ ಅದರಿಂದ ಪಾರಾಗುವ ದಾರಿಯನ್ನು ದೇವರು ಮಾಡಿದ್ದನು.

**ಭಾನುವಾರ** **ಏಪ್ರಿಲ್ 3**

## ಸರ್ಪ

ಆದಿಕಾಂಡ 3:1 ಮತ್ತು 2 ಕೊರಿಂಥ 11:3, ಪ್ರಕಟನೆ 12:7–9 ವಚನಗಳನ್ನು ಓದಿರಿ. ಸರ್ಪವಾಗಿ ಕಾಣಿಸಿಕೊಂಡವರು ಯಾರು? ಆತನು ಹವ್ವಳನ್ನು ಹೇಗೆ ವಂಚಿಸಿತು?

ಆದಿಕಾಂಡ 3ನೇ ಅಧ್ಯಾಯದ ಮೊದಲ ವಚನವು ಯಾವುದಾದರೂ ಒಂದು ಸರ್ಪದ ಬಗ್ಗೆ ಹೇಳದೆ ಒಂದು ನಿರ್ದಿಷ್ಟವಾದ ಸರ್ಪದ ಬಗ್ಗೆಯೇ ಒತ್ತುಕೊಟ್ಟು ಹೇಳುತ್ತದೆ. ಇದು ಎಲ್ಲರಿಗೂ ಚೆನ್ನಾಗಿ ಗೊತ್ತಿರುವ ಸರ್ಪವೆಂದು ಓದುಗನು ತಿಳಿದುಕೊಳ್ಳುವಂತೆ ಬರೆಯಲ್ಪಟ್ಟಿದೆ.

ಖಂಡಿತವಾಗಿ ಸತ್ಯವೇದವು ಈ ಸರ್ಪವನ್ನು ದೇವರ ವೈರಿಯೆಂದು ಗುರುತು ಹಿಡಿಯುತ್ತದೆ (ಯೆಶಾಯ 27:1) ಮತ್ತು ಅದನ್ನು ಪಿಶಾಚನೆಂತಲೂ ಸೈತಾನನೆಂತಲೂ ಸ್ಪಷ್ಟವಾಗಿ ಕರೆಯುತ್ತದೆ (ಪ್ರಕ 12:9, ಯೆಶಾಯ 27:1). "ಪುರಾತನ ಕಾಲದಲ್ಲಿ ಪೂರ್ವಾತ್ಯ ದೇಶಗಳು ಸರ್ಪವನ್ನು ದುಷ್ಟಶಕ್ತಿಯ ಸ್ವರೂಪಿಯನ್ನಾಗಿ ಕಾಣುತ್ತಿದ್ದವು. "ಸೈತಾನನು ತನ್ನ ಕಾರ್ಯವು ಮನುಷ್ಯನಿಗೆ ಹೊಂದಿಕೊಳ್ಳುವ ಸರ್ಪದ ಮಾಧ್ಯಮವನ್ನಾಗಿ ಆರಿಸಿಕೊಂಡೆನು. ಸರ್ಪವು ಆ ಕಾಲದಲ್ಲಿ ಭೂಮಿಯ ಮೇಲೆ ವಾಸಿಸುವ ಬಹಳ ಯುಕ್ತಿಯುಳ್ಳ ಮತ್ತು ಸೌಂದರ್ಯವುಳ್ಳ ಜೀವಿಗಳಲ್ಲಿ ಸರ್ಪವೂ ಸಹಾ ಒಂದಾಗಿತ್ತು. ಅದಕ್ಕೆ ರೆಕ್ಕೆಗಳಿದ್ದವು.

ಅದು ಆಕಾಶದಲ್ಲಿ ತನ್ನ ಬಂಗಾರ ವರ್ಣದ ರೆಕ್ಕೆಗಳನ್ನು ಬಿಚ್ಚಿಕೊಂಡು ಹಾರುವಾಗ ಅವು ಥಳಥಳನೆ ಹೊಳೆಯುತ್ತಾ ಕಣ್ಣನ್ನು ಕೋರೈಸುತ್ತಿದ್ದವು"– ಎಲೆನ್ ಜಿ ವೈಟಮ್ಮನವರ "ನಮ್ಮ ಪಿತೃಗಳು ಮತ್ತು ಪ್ರವಾದಿಗಳು" ಪುಸ್ತಕದಲ್ಲಿ 53ನೇ ಪುಟ.

ಪಿಶಾಚನ ಬಗ್ಗೆ ಮಾತಾಡುವಾಗ ಆತನು ಯಾವುದೇ ರೂಪದಲ್ಲಿ ಕಾಣಿಸಿಕೊಂಡಿದ್ದರೂ ಸತ್ಯವೇದವು ಆತನನ್ನು ಕೇವಲ ರೂಪಕವಾಗಿ ಉಪಯೋಗಿಸುವುದಿಲ್ಲ. ಸತ್ಯವೇದವು ಸೈತಾನನ್ನು ನಿಜವಾದ ಜೀವಿಯನ್ನಾಗಿ ಚಿತ್ರಿಸುತ್ತದೆಯೇ ಹೊರತು ಅದು ಆತನನ್ನು ಕೇವಲ ಕೃತಕವಾದ ಸಂಕೇತವನ್ನಾಗಿ ಅಥವಾ ಮಾನವತೆಯ ದೋಷಭಾಗವನ್ನು ಇಲ್ಲದೆ ದುಷ್ಟತನವನ್ನು ಬಿಂಬಿಸುವಂತಹ ತತ್ವವನ್ನಾಗಿ ವರ್ಣಿಸುವುದಿಲ್ಲ.

ಸರ್ಪವು ತನ್ನನ್ನು ತಾನು ದೇವರ ವೈರಿಯಾಗಿ ನಿರೂಪಿಸಿಕೊಳ್ಳುವುದಿಲ್ಲ. ಆದರೆ ದೇವರ ವಾಕ್ಯವನ್ನು ಬೆಂಬಲಿಸುತ್ತಿದೆ ಎಂದು ಕಾಣುವ ಹಾಗೆ ವಾಕ್ಯವನ್ನು ಮತ್ತೆ ಮತ್ತೆ ಉಲ್ಲೇಖ ಮಾಡುತ್ತದೆ. ಅದು ಆರಂಭದಿಂದಲೂ ದೇವರನ್ನು ಉಲ್ಲೇಖಿಸಲು ಬಯಸುತ್ತದೆ. ಮಾತ್ರವಲ್ಲದೆ ನಂತರ ದೇವರ ವಾಕ್ಯವನ್ನೇ ಉದಾಹರಿಸತೊಡಗುತ್ತದೆ (ಮತ್ತಾಯ 4:6) ಸರ್ಪವು ತಕ್ಷಣ ಸ್ತ್ರೀಯೊಂದಿಗೆ ವಾದ ಮಾಡಲು ತೊಡಗದಿರುವುದನ್ನು ಕಾಣುತ್ತೇವೆ. ಅದಕ್ಕೆ ಬದಲಾಗಿ ದೇವರು ಅವರಿಗೆ ಹೇಳಿರುವ ಮಾತನ್ನು ತಾನು ಸದಾ ನಂಬುತ್ತೇನೆ ಎಂಬುದಾಗಿ ಅದಾಮ ಹವ್ವಳು ಭಾವಿಸಿಕೊಳ್ಳುವಂತೆ ಮಾಡಲು ಪ್ರಶ್ನೆಯನ್ನು ಕೇಳುತ್ತಾನೆ. ಏನವಾ.... ದೇವರು ಅಪ್ಪಣೆ ಕೊಟ್ಟಿರುವುದು ನಿಜವೋ? (ಆ.ಕಾಂಡ 3:1) ಎಂಬುದಾಗಿ ಹವ್ವಳನ್ನು ಕೇಳುತ್ತಾನೆ. ಹಾಗಾಗಿ ಇದು ಆರಂಭದಿಂದಲೂ ಎಷ್ಟು ಕುಯುಕ್ತಿಯುಳ್ಳ ಹಾಗಾಗಿ ಮತ್ತು ವಂಚನೆಯುಳ್ಳ ಜೀವಿಯಾಗಿತ್ತು ಎಂಬುದನ್ನು ಕಾಣುತ್ತೇವೆ. ಮತ್ತು ನಮಗೆ ತಿಳಿದಿರುವಂತೆ ಆ ಕೆಲಸದಲ್ಲಿ ಅದು ಯಶಸ್ಸನ್ನು ಸಹಾ ಪಡೆಯುತ್ತದೆ.

ಸೈತಾನನು ಏದೇನ್ ತೋಟದಲ್ಲಿ ಪಾಪರಹಿತ ಹವ್ವಳನ್ನೇ ವಂಚಿಸಲು ಶಕ್ತನಾಗಿರುವಲ್ಲಿ ನಾವು ಇನ್ನೆಷ್ಟು ಹೆಚ್ಚಾಗಿ ಅಪಾಯಕ್ಕೊಳಗಾಗುವರಾಗಿದ್ದೇವೆ? ಆತನ ವಂಚನೆಗೆ ಒಳಗಾಗದಂತೆ "ನಮಗಿರುವ ಅತ್ಯುತ್ತಮವಾದ ಸಹಾಯ (ರಕ್ಷಣೆ) ಯಾವುದು?

**ಸೋಮವಾರ** **ಏಪ್ರಿಲ್ 4**

## ತಿನ್ನಬಾರದ ಹಣ್ಣು

ಆದಿಕಾಂಡ 2:16,17 ಮತ್ತು ಆ.ಕಾಂಡ 3:1–6 (ಹಾಗೂ ಯೋಹಾನ 8:44ನ್ನು ನೋಡಿರಿ). ದೇವರು ಆದಾಮನಿಗೆ ಆಜ್ಞಾಪಿಸಿದ ಮಾತುಗಳನ್ನು ಸರ್ಪವು ಹವ್ವಳಿಗೆ ಹೇಳಿದ ಮಾತುಗಳ ಜೊತೆಗೆ ಹೋಲಿಸಿರಿ. ಈ ಮಾತುಗಳ ನಡುವೆ ಇರುವ ವ್ಯತ್ಯಾಸವೇನು? ಈ ವ್ಯತ್ಯಾಸಗಳ ಅರ್ಥವೇನು?

ದೇವರು ಆದಾಮನ ಜೊತೆ ನುಡಿದ ಮಾತುಗಳಿಗೂ (ಆ.ಕಾಂಡ 2:16,17) ಹವ್ವಳು ಸರ್ಪದ ಜೊತೆಗೆ ನಡೆಸಿದ ಮಾತುಕತೆಗೂ ಇರುವ ಸಾಮ್ಯತೆಗಳನ್ನು ಗಮನಿಸಿ. ಈವಾಗ ಸರ್ಪವು ದೇವರ ಸ್ಥಾನವನ್ನು ಆಕ್ರಮಿಸಿಕೊಂಡು ದೇವರಿಗಿಂತಲೂ ಹೆಚ್ಚಾಗಿ ಗೊತ್ತಿದೆ ಎಂಬಂತೆ ಮಾತಾಡುತ್ತಿದೆ. ಸ್ತ್ರೀಯು ತಾನು ಬಹುಶಃ ದೇವರನ್ನು ತಪ್ಪಾಗಿ ತಿಳಿದುಕೊಂಡಿದ್ದೇನೆ ಎಂದುಕೊಳ್ಳುವಂತೆ ಮಾಡಲು ಸರ್ಪವು ಆಕೆಗೆ ಸುಮ್ಮನೆ ಒಂದು ಪ್ರಶ್ನೆಯನ್ನು ಕೇಳುತ್ತದೆ. ಆದರೆ ಸರ್ಪವು (ಸೈತಾನನು) ನಂತರ ಯಾವುದೇ ಮುಚ್ಚುಮರೆಯಿಲ್ಲದೆ ದೇವರ ಉದ್ದೇಶವನ್ನು ಪ್ರಶ್ನಿಸುವುದಲ್ಲದೆ ಆತನನ್ನೇ ವಿರೋಧಿಸುತ್ತದೆ.

ಸೈತಾನನು ಮರಣ ಮತ್ತು ಒಳ್ಳೆಯದರ ಕೆಟ್ಟದರ ಅರಿವನ್ನು ಕುರಿತ ಎರಡು ವಿಷಯಗಳ ಮೇಲೆ ಆಕ್ರಮಣ ಮಾಡುತ್ತಾನೆ. ನನ್ನ ಮಾತನ್ನು ಮೀರಿ ನಡೆದರೆ ಖಂಡಿತವಾಗಿಯು ಸತ್ತೇ ಸಾಯುವಿ ಎಂದು ದೇವರು ಮನುಷ್ಯನಿಗೆ ಸ್ಪಷ್ಟವಾಗಿ ದೃಢವಾಗಿ ಹೇಳಿರುವಾಗ (ಆ.ಕಾಂಡ 2:17) ಸೈತಾನನು ನೀವು ಹೇಗೂ ಸಾಯುವುದಿಲ್ಲ ನೀವು ಎಂದೆಂದಿಗೂ ಜೀವಿಸುವಿರಿ ಎಂದು ಹೇಳುತ್ತಾನೆ (ಆ.ಕಾಂಡ 3:4).

ದೇವರು ಮನುಷ್ಯನಿಗೆ ಹಣ್ಣನ್ನು ತಿನ್ನಬಾರದು ಎಂದು ಹೇಳಿದರೆ (ಆ.ಕಾಂಡ 2:17), ಸೈತಾನನು ಹಣ್ಣನ್ನು ತಿನ್ನಿರಿ ತಿಂದರೆ ನೀವು ಸಹಾ ದೇವರಂತೆ ಆಗುತ್ತೀರಿ ಎಂದು ಅವರನ್ನು ಉತ್ತೇಜಿಸುತ್ತಾನೆ (ಆ.ಕಾಂಡ 3:5).

ನೀವು ಎಂದೆಂದಿಗೂ ಜೀವಿಸುವಿರಿ (ಅಮರತ್ವ) ಮತ್ತು ದೇವರಂತೆ ಆಗುವಿರಿ ಎಂಬ ಸೈತಾನನ ಎರಡು ಹೇಳಿಕೆಗಳು ಹಣ್ಣನ್ನು ತಿನ್ನುವುದು ಸರಿ ಎಂದು ಹವ್ವಳ ಮನಸ್ಸಿಗೆ ಅನಿಸುವಂತೆ ಮಾಡಿದವು. ಯಾವಾಗ ತಿನ್ನಬಾರದ ಹಣ್ಣನ್ನು ತಿನ್ನಲು

ನಿಶ್ಚಯಿಸಿದಳೋ ಆವಾಗ ದೇವರ ಇರುವಿಕೆಯನ್ನು ಅಲ್ಲಗಳೆದು ಆತನ ಸ್ಥಾನವನ್ನು ತಾನೇ ತುಂಬಿರುವಂತೆ ವರ್ತಿಸತೊಡಗಿದಳು. ಸತ್ಯವೇದವು ಅವಳ ವ್ಯಕ್ತಿತ್ವದಲ್ಲಿ ಆದ ಈ ಬದಲಾವಣೆಯನ್ನು ಸೂಚಿಸುತ್ತದೆ. ಆವಾಗ ಹವ್ವಳು ಆ ಹಣ್ಣಿನ ವಿಷಯದಲ್ಲಿ ದೇವರು ಉಪಯೋಗಿಸಿದ ಭಾಷೆಯನ್ನು ಉಪಯೋಗಿಸುತ್ತಾಳೆ. ಹೇಗೆ ದೇವರು ಉಪಯೋಗಿಸಿದ ಭಾಷೆಯನ್ನು ಮೌಲ್ಯಮಾಪನ ಮಾಡಿ "ಅದು ಬಹು ಒಳ್ಳೆಯದಾಗಿತ್ತು" ಎಂದು ಹೇಳಿದನೋ ಹಾಗೆಯೇ ಹವ್ವಳು ಆ ಮರದ ಹಣ್ಣನ್ನು ತಿನ್ನುವುದಕ್ಕೆ ಉತ್ತಮವಾಗಿಯೂ ನೋಡುವುದಕ್ಕೆ ರಮ್ಯವಾಗಿಯೂ ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿಯೂ ಇದೆ" ಎಂದು ಅದರ ಮೌಲ್ಯಮಾಪನ ಮಾಡಿದಳು (ಆ.ಕಾಂಡ 3:6).

ಅಮರತ್ವ ಮತ್ತು ದೇವರಂತೆ ಆಗುವುದು ಎಂಬ ಈ ಎರಡು ಸೈತಾನನ ಎರಡು ಶೋಧನೆಗಳೇ ಐಗುಪ್ತ ಮತ್ತು ಗ್ರೀಕ್ ಧರ್ಮದಲ್ಲಿರುವ ಅಮರತ್ವದ ಕಲ್ಪನೆಗೆ ಮೂಲವಾಗಿದೆ. ಅಮರತ್ವವು ದೇವರ ಗುಣವೆಂದು ನಂಬಿಕೊಂಡು ತಾವೂ ಕೂಡ ಅದನ್ನು ಸಾಧಿಸಿಕೊಳ್ಳುವ ಸಲುವಾಗಿ ದೈವೀಕ ಸ್ಥಾನವನ್ನು ಹೊಂದಲು ಪ್ರಯತ್ನಿಸುತ್ತಿದ್ದರು. ಇದೇ ರೀತಿಯ ಆಲೋಚನೆಯ ಕ್ರಮವು ಇಬ್ರಿಯ ಕ್ರೈಸ್ತರ ಸಂಸ್ಕೃತಿಯಲ್ಲಿ ರಹಸ್ಯವಾಗಿ ಒಳನುಸುಳಿದ ಪ್ರಯುಕ್ತ ಆತ್ಮವು ನಾಶವಾಗುವುದಿಲ್ಲ. ಅದು ಎಂದೆಂದಿಗೂ ಇರುತ್ತದೆ ಎಂಬ ಅಮರತ್ವದ ಕಲ್ಪನೆಯು ಹುಟ್ಟಿಕೊಂಡಿತು. ಇದೇ ಶ್ರದ್ಧೆ ನಂಬಿಕೆಗಳು ಇಂದಿಗೂ ಅನೇಕ ಸಭೆಗಳೂ ಅಸ್ತಿತ್ವದಲ್ಲಿದೆ. ನಮ್ಮೆಲ್ಲರಲ್ಲೂ ಅನುವಂಶೀಯವಾಗಿ ಅಮರವಾಗಿರುವಂಥದ್ದು ಇದೆ ಎಂಬುದನ್ನು ಬೋಧಿಸುವ ಇಂದಿನ ಎಲ್ಲಾ ಶುದ್ಧ (ನಂಬಿಕೆ)ಯ ಬಗ್ಗೆ ಆಲೋಚಿಸಿರಿ. ಮನುಷ್ಯರ ಸ್ವಭಾವದ ಬಗ್ಗೆ ಮತ್ತು ಮರಣದ ಸ್ಥಿತಿಯ ಬಗ್ಗೆ ನಮಗಿರುವ ತಿಳುವಳಿಕೆಯು ಈ ಅಪಾಯಕರವಾದ ವಂಚನೆಯ ಬಗ್ಗೆ ಬಲಯುತವಾದ ಸಂರಕ್ಷಣೆಯನ್ನು ಒದಗಿಸುತ್ತದೆ ಹೇಗೆ?

**ಮಂಗಳವಾರ** **ಏಪ್ರಿಲ್ 5**

## ದೇವರ ಸಮ್ಮುಖದಲ್ಲಿ ಬಚ್ಚಿಟ್ಟುಕೊಳ್ಳುವುದು

ಆದಿಕಾಂಡ 3:7–13 ವಚನಗಳನ್ನು ಓದಿರಿ. ಆದಾಮ ಮತ್ತು ಹವ್ವಳಿಗೆ ದೇವರ ಸಮ್ಮುಖದಲ್ಲಿ ಬಚ್ಚಿಟ್ಟುಕೊಳ್ಳುವ ಅಗತ್ಯತೆಯನ್ನು ಯಾಕೆ ಭಾವಿಸಿಕೊಂಡರು? ನೀನು

ಎಲ್ಲಿರುತ್ತಿ ಎಂಬ ಪ್ರಶ್ನೆಯನ್ನು ದೇವರು ಯಾಕೆ ಕೇಳಿದನು. ಹೇಗೆ ಆದಾಮ ಮತ್ತು ಹವ್ವಳು ತಮ್ಮ ನಡವಳಿಕೆಯನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ ಮಾಡಿದರು?

ಆದಾಮ ಮತ್ತು ಹವ್ವಳು ಪಾಪದಲ್ಲಿ ಬಿದ್ದುಹೋದಾಗ ದೇವರ ಇರುವಿಕೆಯನ್ನು ಪ್ರತಿಬಿಂಬಿಸುವ ಮಹಿಮೆಯ ವಸ್ತ್ರವನ್ನು ಕಳೆದುಕೊಂಡದ್ದರಿಂದ ಅವರು ಬೆತ್ತಲಾಗಿರುವುದು ಅವರಿಗೆ ಭಾಸವಾಯ್ತು (ಕೀರ್ತನೆ 8:5 ನೋಡಿರಿ ಮತ್ತು ಕೀರ್ತನೆ 104:1,2ರ ಜೊತೆ ಹೋಲಿಸಿರಿ. ಈ ಪಾಪದಿಂದ ದೇವರ ಸ್ವರೂಪವು ಈ ಮನುಷ್ಯನು ಪಾಪ ಮಾಡಿದ ನಿಮಿತ್ತ ಆತನಲ್ಲಿದ್ದ ದೈವ ಸ್ವರೂಪದ ಮೇಲೆ ಪರಿಣಾಮ ಉಂಟಾಯ್ತು. ಅವರು ಅಂಜೂರದ ಎಲೆಗಳನ್ನು ಹೊಲಿದು ಉಟ್ಟುಕೊಂಡರು (ಆದಿಕಾಂಡ 3:7) ಎಂಬ ವಾಕ್ಯದಲ್ಲಿ ಮನುಷ್ಯನು ಮಾಡಿದ ಕ್ರಿಯೆಯನ್ನು ನೋಡುತ್ತೇವೆ. ಅದುವರೆಗೂ ಮಾಡಿದನು ಎನ್ನುವ ಪದವು ಸೃಷ್ಟಿಕರ್ತನಾದ ದೇವರಿಗೆ ಮಾತ್ರ ಅನ್ವಯವಾಗುತ್ತಿತ್ತು (ಆ.ಕಾಂಡ 1:7,16,25 ಇತ್ಯಾದಿ) ಅವರು ತಮ್ಮ ಪಾಪಗಳನ್ನು ಮುಚ್ಚಿಕೊಳ್ಳುವ ಸ್ವಪ್ರಯತ್ನದಲ್ಲಿ ತಮ್ಮನ್ನು ತಾವೇ ದೇವರ ಸ್ಥಾನದಲ್ಲಿ ಇರಿಕೊಂಡಂತೆ ಕಾಣುತ್ತದೆ. ತಮ ಕ್ರಿಯೆಗಳಿಂದ (ನೇಮನಿಷ್ಠೆಗಳಿಂದ) ನೀತಿ ನಿರ್ಣಯ ಹೊಂದುವ ಪ್ರಯತ್ನವೆಂದು ಪೌಲನು ಖಂಡಿಸುವ ಕಾರ್ಯವು ಇಂಥದ್ದೇ ಆಗಿದೆ.

ದೇವರು ಮನುಷ್ಯನ ಹತ್ತಿರ ಬಂದಾಗ ಅವರ ಮನವೊಲಿಸಿಕೊಳ್ಳಲು "ನೀನು ಎಲ್ಲಿರುತ್ತಿ?" ಎಂಬ ಪ್ರಶ್ನೆಯನ್ನು ಕೇಳುತ್ತಾನೆ (ಆ.ಕಾಂಡ 3:9) ಇದೇ ತೆರನಾದ ಪ್ರಶ್ನೆಯನ್ನು ಪಾಪ ಮಾಡಿದವನು ತನ್ನ ತಪ್ಪನ್ನು ಅರಿತುಕೊಂಡು ಅದಕ್ಕಾಗಿ ಪಶ್ಚಾತ್ತಾಪಪಟ್ಟು ರಕ್ಷಣೆ ಹೊಂದಿಕೊಳ್ಳಲು ಸಹಾಯಕವಾಗಿತ್ತು. ಮನುಷ್ಯನು ಪಾಪವೆಸಗಿದ ಕ್ಷಣದಿಂದಲೇ ಕರ್ತನು ಅವರ ರಕ್ಷಣೆಗೆ ಮತ್ತು ವಿಮೋಚನೆಗೆ ಕೆಲಸ ಮಾಡತೊಡಗುತ್ತಾನೆ.

ಸತ್ಯಸಂಗತಿ ಏನೆಂದರೆ ಇಡೀ ಘಟನೆಯು ತನಿಖೆಯುಕ್ತ ನ್ಯಾಯವಿಚಾರಣೆಯ ದೃಶ್ಯವನ್ನು ಪ್ರತಿಬಿಂಬಿಸುತ್ತದೆ. ಇದು ನ್ಯಾಯಾಧಿಪತಿಯೊಬ್ಬನು ಅಪರಾಧಿಯನ್ನು ಪ್ರಶ್ನಿಸುವುದರೊಂದಿಗೆ ಶುರುವಾಗುತ್ತದೆ (ಆ.ಕಾಂಡ 3:9) ಆತನಿಗೆ ತಕ್ಕ ಶಿಕ್ಷೆಯನ್ನು ವಿಧಿಸುವ ಸಲುವಾಗಿ ವಿಚಾರಣೆ ನಡೆಯುತ್ತದೆ (ಆ.ಕಾಂಡ 3:14–19). ಆದರೆ

ಆತನು ಅದನ್ನು ಪಾಪಿಯಲ್ಲಿ ಪಶ್ಚಾತ್ತಾಪವನ್ನು ಹುಟ್ಟಿಸುವುದಕ್ಕಾಗಿಯೂ ಮಾಡುತ್ತಾನೆ ಇದು ಅಂತಿಮವಾಗಿ ಪಾಪಿಯನ್ನು ರಕ್ಷಣೆಗೆ ಕರೆದೊಯ್ಯುತ್ತದೆ (ಆ.ಕಾಂಡ 3:15). ಸತ್ಯವೇದದಾದ್ಯಂತ ಕಂಡುಬರುವ ಇದೇ ಆಗಿದೆ. ಮೊದಲಿಗೆ, ತಪ್ಪು ಮಾಡಿದವರು ಸಾಮಾನ್ಯವಾಗಿ ತಮ್ಮ ಮೇಲೆ ಬಂದ ಅಪವಾದವನ್ನು ಒಪ್ಪಿಕೊಳ್ಳದೆ ಇನ್ನೊಬ್ಬರನ್ನು ದೂರುವಂತೆಯೇ ಆದಾಮ ಮತ್ತು ಹವ್ವಳೂ ಸಹಾ ಮಾಡುತ್ತಾರೆ. ದೇವರು ಆದಾಮನನ್ನು ಪ್ರಶ್ನೆ ಮಾಡಿದಾಗ ಆತನು ತನಗೆ ಹೆಂಡತಿಯಾಗಿರಲು ದೇವರು ಕೊಟ್ಟ ಹೆಂಡತಿಯೇ ಕಾರಣವೆಂದು ಉತ್ತರಿಸುತ್ತಾನೆ (ಆ.ಕಾಂಡ 3:12)– ಆಕೆಯೇ ತನ್ನನ್ನು ತಪ್ಪು ಮಾಡಲು ಪ್ರೇರೇಪಿಸಿದಳು. ಆದುದರಿಂದ ಇದು ಆಕೆಯ ತಪ್ಪು (ಪರೋಕ್ಷವಾಗಿ ದೇವರ ತಪ್ಪು) ತನ್ನದಲ್ಲವೆಂದು ವಾದಿಸುತ್ತಾನೆ.

ಹವ್ವಳು ತನ್ನ ತಪ್ಪನ್ನು ಸರ್ಪವು ತನ್ನನ್ನು ವಂಚಿಸಿತು ಎಂದು ಅದರ ಮೇಲೆ ಹಾಕುತ್ತಾಳೆ. ಆ.ಕಾಂಡ 3:13ರಲ್ಲಿ 'ವಂಚನೆ' ಎಂದು ಅರ್ಥವುಳ್ಳ ನಶಾ ಎಂಬ ಇಬ್ರಿಯ ಪದವು ಜನರಿಗೆ ತಪ್ಪಾದ ಭರವಸೆಕೊಟ್ಟು ತಾವು ಸರಿಯಾದದನ್ನೇ ಮಾಡುತ್ತಿದ್ದೇವೆ ಎಂದು ನಂಬಿಕೊಳ್ಳುವನು ಅರ್ಥವುಳ್ಳದ್ದಾಗಿದೆ (2 ಅರಸುಗಳು 19:10, ಯೆಶಾಯ 37:10, ಯೆರೆಮೀಯ 49:16).

ಹವ್ವಳು ತನಗೆ ಹಣ್ಣನ್ನು ಕೊಟ್ಟು ತಿನ್ನುವಂತೆ ಮಾಡಿದಳು ಎಂದು ಆದಾಮನು ದೂರುತ್ತಾನೆ (ಇದರಲ್ಲಿ ಸ್ವಲ್ಪ ಸತ್ಯಾಂಶವಿದೆ) ಮತ್ತು ಸರ್ಪವು ತನ್ನನ್ನು ವಂಚಿಸಿತು ಎಂದು ಹವ್ವಳು ಹೇಳುತ್ತಾಳೆ (ಇದರಲ್ಲೂ ಸಹ ಸ್ವಲ್ಪ ಸತ್ಯಾಂಶವಿದೆ). ಆದರೆ ಅಂತಿಮವಾಗಿ ಇಬ್ಬರೂ ತಪ್ಪಿತಸ್ಥರಾಗಿದ್ದರು.

ತಾವು ಮಾಡಿದ ತಪ್ಪಿಗೆ ಇತರರನ್ನು ನಿಂದಿಸುತ್ತಾರಲ್ಲವೇ? ಇಂತಹ ಮೋಸದ ಬಲೆಗೆ ನಾವು ಸಹಾ ಸುಲಭವಾಗಿ ಬೀಳುತ್ತೇವೆ ಯಾಕೆ?

**ಬುಧವಾರ** **ಏಪ್ರಿಲ್ 6**

## ಸರ್ಪಕ್ಕೆ ಒದಗಿದ ದುರ್ಗತಿ

"ನಿನಗೂ ಈ ಸ್ತ್ರೀಗೂ ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವುದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ" (ಆ.ಕಾಂಡ 3:15).

ಕರ್ತನು ಇಲ್ಲಿ ಸರ್ಪಕ್ಕೆ ಏನು ಹೇಳುತ್ತಾನೆ ಮತ್ತು ಈ ವಾಕ್ಯಗಳಲ್ಲಿ ಯಾವ ನಿರೀಕ್ಷೆ ಭರವಸೆಗಳು ತುಂಬಿವೆ?

ದೇವರು ಸರ್ಪವನ್ನು ನ್ಯಾಯವಿಚಾರಣೆಗೆ ಒಳಪಡಿಸುತ್ತಾನೆ. ಯಾಕೆಂದರೆ ಇಡೀ ಘಟನೆಯನ್ನು ಶುರುಮಾಡಿದುದು ಸರ್ಪವೆ. ಈ ವಿವರಣೆಯಲ್ಲಿ ಪಾಪಕ್ಕೆ ಗುರಿಯಾದ ಒಂದೇ ಜೀವಿ ಸರ್ಪವೇ ಆಗಿದೆ. ಇಲ್ಲಿ ನಾವು ಒಂದು ಬಗೆಯಲ್ಲಿ (ರೀತಿಯಲ್ಲಿ) ಸೃಷ್ಟಿಯ ಹಿಂದಿನ ಪರಿಸ್ಥಿತಿಗೆ ತಲುಪುತ್ತೇವೆ. ಸೃಷ್ಟಿಕಾರ್ಯವು ಜೀವಕ್ಕೂ ಒಳ್ಳೆಯದರ ಮೆಚ್ಚಿಗೆಗೂ ಮತ್ತು ಆಶೀರ್ವಾದಗಳಿಗೂ ನಡೆಸಿದರೆ ನ್ಯಾಯ ವಿಚಾರಣೆಯು ಮರಣಕ್ಕೂ ಕೆಟ್ಟದಕ್ಕೂ ಮತ್ತು ಶಾಪಗಳಿಗೂ ನಡೆಸುತ್ತದೆ. ಹಾಗೆಯೇ ನಿರೀಕ್ಷೆ ರಕ್ಷಣೆಯ ವಾಗ್ದಾನಳನ್ನೂ ಕೊಡುತ್ತದೆ. ಜಜ್ಜಲ್ಪಟ್ಟ ಸರ್ಪವು ಶಾಪಕ್ಕೆ ಒಳಗಾಗಿ ಧೂಳನ್ನು ತಿನ್ನುತ್ತಿರುವ ಮಬ್ಬಾದ ಚಿತ್ರದೊಂದಿಗೆ ಮಾನವತೆಯು ರಕ್ಷಣೆ ಹೊಂದುವ ಭರವಸೆಯು, ಪ್ರವಾದನೆಯ ರೂಪದಲ್ಲಿ ಹೊಳೆಯುತ್ತಾ ಕಾಣಿಸುತ್ತದೆ. ಆದಾಮ ಮತ್ತು ಹವ್ವಳನ್ನು ನ್ಯಾಯವಿಚಾರಣೆಗೆ ಒಳಪಡಿಸಿ ಅವರಿಗೆ ಶಿಕ್ಷೆ ಕೊಡುವ ಮೊದಲೇ ದೇವರು ಅವರಿಗೆ ವಿಮೋಚನೆಯ ಭರವಸೆ ನಿರೀಕ್ಷೆಗಳನ್ನು ಕೊಡುತ್ತಾನೆ (ಆ.ಕಾಂಡ 3:15). ಹೌದು, ಅವರು ಪಾಪದಲ್ಲಿ ಬಿದ್ದರು; ಹೌದು ಅವರು ಮಾಡಿದ ಪಾಪದ ನಿಮಿತ್ತ ಕಷ್ಟಸಂಕಟಗಳಿಗೆ ಗುರಿಯಾದರು, ಹಾಗಾಗಿ ಅವರು ತಾವು ಮಾಡಿದ ಪಾಪದಿಂದ ಸಾಯುವುದೂ ಉಂಟು. ಆದರೆ ಇವೆಲ್ಲದರ ಹೊರತಾಗಿಯೂ ಅಂತ್ಯದಲ್ಲಿ ನಿರೀಕ್ಷೆ, ರಕ್ಷಣೆಯ ನಿರೀಕ್ಷೆಯ ಕೊಡಲ್ಪಟ್ಟಿದೆ.

ಆದಿಕಾಂಡ 3:15ನ್ನು ರೋಮಾಪುರ 16:20, ಇಬ್ರಿಯ 2:14 ಮತ್ತು ಪ್ರಕಟನೆ 12:17 ವಚನಗಳ ಜೊತೆ ಹೋಲಿಸಿರಿ. ಈ ವಚನಗಳಲ್ಲಿ ರಕ್ಷಣೆಯ ಯೋಜನೆ ಮಾತ್ರವಲ್ಲದೆ. ಮಹಾಹೋರಾಟವು ಸಹಾ ಪ್ರಕಟಗೊಂಡಿವೆ ಹೇಗೆ?

ಆದಿಕಾಂಡ 3:15 ಮತ್ತು ಪ್ರಕಟನೆ 12:17 ವಚನಗಳ ನಡುವೆ ಇರುವ ಸಾಮ್ಯತೆಗಳನ್ನು ಗಮನಿಸಿರಿ. ಘಟಸರ್ಪವು (ಸೈತಾನನು) ಆ ಸ್ತ್ರೀಯು ಮೇಲೆ ಕೋಪಿಸಿಕೊಂಡು ಆಕೆಯ ಸಂತಾನದವರಲ್ಲಿ ..... ಯುದ್ಧ ಮಾಡುವುದಕ್ಕೆ ನಿಂತನು ಎಂದು ಪ್ರಕಟನೆಯಲ್ಲಿ ಹೇಳಿರುವ ಸ್ತ್ರೀಯ ಸಂತಾನ ಮತ್ತು ಏದೇನಿನ ಸ್ತ್ರೀಯ ಸಂತಾನವು ಒಂದೇ ಆಗಿದೆ. ಏದೇನಿನಲ್ಲಿ ಮನುಷ್ಯನು ಪಾಪದಲ್ಲಿ ಬಿದ್ದಾಗ ಶುರುವಾದ ಮಹಾಹೋರಾಟವು, ಅಂತ್ಯಕಾಲದವರೆಗೂ ನಡೆದುಕೊಂಡು ಬಂದಿದೆ.

ಏನೇ ಇರಲಿ ಸೈತಾನನು ಈ ಹೋರಾಟದಲ್ಲಿ ಜಜ್ಜಲ್ಪಡುತ್ತಾನೆ (ಸೋತು ಹೋಗುತ್ತಾನೆ) ಎಂದು ಈಗಾಗಲೇ ಏದೇನಿನಲ್ಲಿ ಕೊಟ್ಟಿರುವ ವಾಗ್ದಾನವು ಪ್ರಕಟನೆಯ ವಚನದಲ್ಲಿ ನೆರವೇರುವುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಪ್ರಕಟನೆ 20:10ನೇ ವಚನವು ಸೈತಾನನ ಅಂತಿಮ ಅವಸಾನವನ್ನು ವರ್ಣಿಸುತ್ತದೆ.

ಹಾಗಾಗಿ, ಮನುಷ್ಯನಿಗೆ ಕೆಟ್ಟದ್ದರ ಅರಿವಿನಿಂದ ಉಂಟಾದ ಭಯಾನಕ ಗೊಂದಲದ ಪರಿಸ್ಥಿತಿಯಿಂದ ಹೊರಬರುವ ಭರವಸೆ ನಿರೀಕ್ಷೆಗಳನ್ನು ಆರಂಭದಲ್ಲೇ ಕೊಡಲಾಯ್ತು, ಅದೇ ಭರವಸೆ ನಿರೀಕ್ಷೆಗಳನ್ನು ಈವಾಗ ನಾವು ಹಂಚಿಕೊಳ್ಳಬಹುದಾಗಿದೆ.

ಭೂಮಿಯ ಮೇಲೆ ಪಾಪ ಮತ್ತು ಕೆಟ್ಟದ್ದು ಶುರುವಾದ ಏದೇನಿನಲ್ಲಿಯೇ ನಮ್ಮ ಸೃಷ್ಟಿಕರ್ತನು ನಮಗೆ ರಕ್ಷಣೆಯ ಏರ್ಪಾಟನ್ನು ನೋಡುವಾಗ ನಮಗೆ ಆದರಣೆಯು ಉಂಟಾಗುತ್ತದೆ ಏಕೆ?

**ಗುರುವಾರ** **ಏಪ್ರಿಲ್ 7**

## ಮಾನವನ ಅಂತ್ಯಸ್ಥಿತಿ

ಆದಿಕಾಂಡ 3:15–24 ವಚನಗಳನ್ನು ಓದಿರಿ. ಆದಾಮ ಮತ್ತು ಹವ್ವಳು ಪಾಪದಲ್ಲಿ ಬಿದ್ದುಹೋದುದರ ಫಲವಾಗಿ ಅವರಿಗೆ ಏನಾಯ್ತು?

ದೇವರು ಸರ್ಪಕ್ಕೆ ಕೊಟ್ಟ ನ್ಯಾಯತೀರ್ಪನ್ನು ಶಾಪವೆಂದು ಸ್ಪಷ್ಟವಾಗಿ ಗುರುತಿಸಬಹುದು. ಆದರೆ ಸ್ತ್ರೀ ಮತ್ತು ಪುರುಷನಿಗೆ ಕೊಟ್ಟ ತೀರ್ಪು ಅಂಥದಲ್ಲ. ಶಾಪವೆಂಬ ಶಬ್ದವು ಮತ್ತೊಮ್ಮೆ ಭೂಮಿಗೆ ಅನ್ವಯವಾಗಿ ಪ್ರಯೋಗಿಸಲ್ಪಟ್ಟಿದೆ (ಆ.ಕಾಂಡ 3:17). ಪುರುಷನ ವಿಷಯದಲ್ಲಿ ದೇವರು ಯೋಜನೆಗೆ ಯೋಚಿಸಿದುದಕ್ಕೆ ವಿರುದ್ಧವಾದ ಬೇರೊಂದು ಯೋಜನೆಯನ್ನು ಹೊಂದಿದ್ದನು. ಸರ್ಪಕ್ಕೆ ಇಲ್ಲದ ನಿರೀಕ್ಷೆಯನ್ನು ಆ ಸ್ತ್ರೀಪುರುಷರಿಗೆ ಕೊಟ್ಟನು.

ಸರ್ಪದ ಒಡನಾಟದಿಂದ ಸ್ತ್ರೀಯು ಪಾಪದಲ್ಲಿ ಬಿದ್ದುದರಿಂದ ದೇವರು ಸ್ತ್ರೀಯ ವಿಷಯದಲ್ಲಿ ಕೆಟ್ಟ ನ್ಯಾಯತೀರ್ಪನ್ನು ವಿವರಿಸುವ ವಚನವು ಸರ್ಪಕ್ಕೆ ಕೊಟ್ಟ ನ್ಯಾಯತೀರ್ಪಿಗೆ ಸಂಬಂಧಪಡುತ್ತದೆ. ಆದಿಕಾಂಡ 3:16ರಲ್ಲಿ ಜರುಗುವ ಕಾರ್ಯವು ಆದಿಕಾಂಡ 3:15ರ ಕಾರ್ಯವು ಜರುಗಿದ ತಕ್ಷಣವೇ ನಡೆಯುವುದು ಮಾತ್ರವಲ್ಲ ಇವೆರಡು ಪ್ರವಾದನೆಗಳಲ್ಲಿರುವ ಸಾಮ್ಯತೆಗಳು ಏನನ್ನು ಸ್ಪಷ್ಟವಾಗಿ ಸೂಚಿಸುತ್ತದೆ

ಎಂದರೆ ಸ್ತ್ರೀಯ ವಿಷಯವಾದ ಆದಿಕಾಂಡ 3:16ರ ಪ್ರವಾದನೆಯನ್ನು 3:15ರ ಮೆಸ್ಸೀಯನ ವಿಷಯವಾಗಿರುವ ಪ್ರವಾದನೆಗೆ ಸಂಬಂಧ ಮಾಡಿಕೊಂಡು ಓದಬೇಕು. ಆದುದರಿಂದ ಸ್ತ್ರೀಯು ಮಗುವನ್ನು ಹೆರುವ ವಿಷಯದಲ್ಲಿ ದೇವರು ಕೊಟ್ಟಿರುವ ನ್ಯಾಯತೀರ್ಪನ್ನು ರಕ್ಷಣೆಗೆ ಸಂಬಂಧಪಟ್ಟ ಹಾಗೆ ಸಕಾರಾತ್ಮಕವಾದ ದೃಷ್ಟಿಯಲ್ಲಿ ಅರ್ಥ ಮಾಡಿಕೊಳ್ಳಬೇಕು (ಯಾಕೆಂದರೆ ಮಗುವನ್ನು ಹಡೆಯುವುದು ಸ್ತ್ರೀಯರಿಗೆ ಶ್ರಮದಾಯವಾಗಿದ್ದರೂ ಕ್ರಿಸ್ತನು ಸ್ತ್ರೀಯಲ್ಲೇ ಹುಟ್ಟಬರಬೇಕಾಗಿತ್ತು). ಆದುದರಿಂದ ಸ್ತ್ರೀಗೆ ದೇವರು ಕೊಟ್ಟ ಶಿಕ್ಷೆಯಲ್ಲಿ ಮನುಷ್ಯರಿಗೆ ಬೇಕಾದ ಆಶೀರ್ವಾದವನ್ನೂ ಸಹಾ ಇಟ್ಟಿದ್ದಾನೆ (1 ತಿಮೊಥೆ 2:14,15 ವಚನಗಳಿಗೆ ಹೋಲಿಸಿರಿ).

ಆ ಪುರುಷನು ದೇವರ ಮಾತನ್ನು ಕೇಳುವ ಬದಲಾಗಿ ತನ್ನ ಹೆಂಡತಿಯ ಮಾತನ್ನು ಕೇಳಿ ಪಾಪಮಾಡಿದುದರಿಂದ ಯಾವ ಭೂಮಿಯ ಮಣ್ಣಿನಿಂದ ತೆಗೆಯಲ್ಪಟ್ಟವನೋ ರೂಪಗೊಂಡನೋ ಆ ಭೂಮಿಗೆ ಆತನ ನಿಮಿತ್ತ ಶಾಪ ಬಂತು (ಆ.ಕಾಂಡ 3:17). ಅದರ ಫಲವಾಗಿ ಕಷ್ಟಪಟ್ಟು ದುಡಿಯಬೇಕಾಗಿ ಬಂತು (ಆ.ಕಾಂಡ 3:17–19) ಮತ್ತು ಮಣ್ಣಿನಿಂದ ತೆಗೆಯಲ್ಪಟ್ಟದ್ದರಿಂದ ಪುನಃ ಮಣ್ಣಿಗೆ ಸೇರಬೇಕಾಯ್ತು (ಆ.ಕಾಂಡ 3:19). ಇದು ಹೀಗೆ ಎಂದೆಂದಿಗೂ ಆಗಬಾರದಾಗಿತ್ತು. ಯಾಕೆಂದರೆ ಎಂದಿಗೂ ದೇವರ ಮೂಲಯೋಜನೆಯ ಭಾಗವು ಇದಾಗಿರಲಿಲ್ಲ. ಹತಾಶೆಯಿಂದ ಮರಣವನ್ನು ಎದುರುನೋಡಬೇಕಾದ ಆದಾಮನು ತನ್ನ ಹೆಂಡತಿಯಾದ ಹವ್ವಳು ಮಗುವನ್ನು ಹೆತ್ತಳು. ಅವನ ಜೀವನದಲ್ಲಿ ನಿರಾಶೆಗೆ ಪ್ರತಿಯಾಗಿ ಮಗನು ಹುಟ್ಟಿದನು. (ಆ.ಕಾಂಡ 3:20). ಮರಣದ ನಡುವೆಯೂ ಆತನು ಜೀವದ ನಿರೀಕ್ಷೆಯನ್ನು ಕಂಡದ್ದು ಅರ್ಥಗರ್ಭಿತವಾಗಿದೆ. ವಾತ್ಸಲ್ಯ ತುಂಬಿದ ತಂದೆತಾಯಂದಿರಿಗೆ ದೇವರು ಒಳ್ಳೆಯದನ್ನೇ ಬಯಸಿದನು. ಎಂದಿಗೂ ಕೆಟ್ಟದ್ದನ್ನು ಬಯಸಲಿಲ್ಲ. ಆದರೆ ಮನುಷ್ಯನಿಗೆ ಕೆಟ್ಟದ್ದು ಗೊತ್ತಾಗಿರುವುದರಿಂದ ಅವನನ್ನು ರಕ್ಷಿಸಲು ಮಾಡಬೇಕಾದುದೆಲ್ಲವನ್ನೂ ದೇವರು ಮಾಡುವವನಾಗಿದ್ದಾನೆ. ಹಾಗಾಗಿ ಈ ನ್ಯಾಯತೀರ್ಪುಗಳ ನಡುವೆಯೂ ನಮ್ಮ ಮೊದಲ ತಂದೆತಾಯಿಗಳು ದೇವರಿಗೆ ಅವಿಧೇಯರಾದಾಗ್ಯೂ ಅವರಿಗಿರುವ ಎಲ್ಲಾ ನಿರೀಕ್ಷೆಗಳು ಕಳೆದುಹೋಗಲಿಲ್ಲ. ಅವರು ಏದೇನಿನ ನಿಜವಾದ ಪರದೈಸಿನಲ್ಲಿ ಜೀವಿಸುತ್ತಿರುವಾಗ ಅವರಿಗೆ ದೇವರಲ್ಲಿ, ಆತನ ಮಾತಿನಲ್ಲಿ ಅಥವಾ ಆತನು ಅವರಿಗೆ ತೋರಿಸಿದ ಪ್ರೀತಿಯ ಮೇಲೆ ಸಂದೇಹ ಪಡುವುದಕ್ಕೆ ಕೇವಲ ಯಾವ ಕಾರಣವೂ ಇರಲಿಲ್ಲ.

ನಾವು ಜ್ಞಾನವು ಬಹಳ ಉತ್ತಮವಾದುದು ಎಂದು ತಿಳಿದುಕೊಳ್ಳುವ ಪ್ರವೃತ್ತಿಯನ್ನು ಹೊಂದಿದ್ದೇವೆ. ಆದಾಗ್ಯೂ ಯಾವಾಗಲೂ ಇದು ಸರಿಯಾಗಿರುವುದಿಲ್ಲ ಏಕೆ? ಕೆಲವು ವಿಷಯಗಳನ್ನು ನಾವು ತಿಳಿಯದಿರುವುದೇ ಉತ್ತಮವಾದುದು ಅವು ಯಾವುವು?

**ಶುಕ್ರವಾರ** **ಏಪ್ರಿಲ್ 8**

**ಹೆಚ್ಚಿನ ಚಿಂತನೆಗೆ :** ನಿತ್ಯಜೀವದಾಯಕ ವೃಕ್ಷಕ್ಕೂ ಒಳ್ಳೇದರ ಕೆಟ್ಟದರ ಅರುಹನ್ನು ಹುಟ್ಟಿಸುವ ವೃಕ್ಷಕ್ಕೂ ಇರುವ ಸಂಬಂಧವನ್ನು ಪರಿಗಣಿಸಿರಿ. ಅವುಗಳ ತೋಟದ ಮಧ್ಯದಲ್ಲಿದ್ದವು ಎಂಬ ಸಂಗತಿಯು ಅವುಗಳ ನಡುವೆ ಇರುವ ಸಂಬಂಧವನ್ನು ಸೂಚಿಸುತ್ತವೆ (ಆ.ಕಾಂಡ 2:9). ಆದರೆ ಕೇವಲ ಭೌಗೋಳಿಕವಾದುದಕ್ಕಿಂತ ಹೆಚ್ಚಾದ ಈ ಕಾರಣವು ಮರಗಳ ನಡುವೆ ಇತ್ತು. ಮನುಷ್ಯನು ಒಳ್ಳೇದರ ಮತ್ತು ಕೆಟ್ಟದರ ಅರಿವನ್ನು ಹುಟ್ಟಿಸುವ ಹಣ್ಣನ್ನು ತಿಂದುದರಿಂದ ಅವರು ದೇವರಿಗೆ ಅವಿಧೇಯರಾದರು ಮತ್ತು ಪಾಪಿಗಳಾಗಿಯೇ ಶಾಶ್ವತವಾಗಿ ಜೀವಿಸಬಾರದೆಂದು ಜೀವದಾಯಕ ಹಣ್ಣನ್ನು ತಿನ್ನುವ ಅವಕಾಶವು ಸಹಾ ಅವರಿಗೆ ತಪ್ಪಿಹೋಯ್ತು. ಇದು ಒಂದು ಆಳವಾದ ನಿಯಮವನ್ನು ಒಳಗೊಂಡಿದೆ. ನೈತಿಕ ಮತ್ತು ಆತ್ಮೀಕ ಆಯ್ಕೆಗಳು ನಮ್ಮ ಜೈವೀಕ ಜೀವನದ ಮೇಲೂ ಪರಿಣಾಮ ಬೀರುತ್ತವೆ. ಸೊಲೊಮೋನನು ತಾನು ಹೇಳುವಂತೆ ಮಗನಿಗೆ ಹೇಳುವಂತೆ ಕಂದಾ; ನನ್ನ ಉಪದೇಶವನ್ನು ಮರೆಯಬೇಡ, ನನ್ನ ಆಜ್ಞೆಗಳನ್ನು ಮನಃಪೂರ್ವಕವಾಗಿ ನಡಿಸು. ಅವು ನಿನ್ನ ದಿನಗಳನ್ನು ಹೆಚ್ಚಿಸಿ ನಿನ್ನ ಆಯುಷ್ಯವನ್ನು ವೃದ್ಧಿಗೊಳಿಸಿ ನಿನಗೆ ಸುಕ್ಷೇಮವನ್ನು ಉಂಟುಮಾಡುವವು (ಜ್ಞಾ 3:1,2). ಈ ಸಂಬಂಧವು ಪರಲೋಕದ ದಿವ್ಯ ಯೆರೂಸಲೇಮಿನಲ್ಲೂ ಮತ್ತೆ ಕಾಣಿಸಿಕೊಳ್ಳುತ್ತದೆ. ಅಲ್ಲಿ ಬೀದಿಯ ಮಧ್ಯೆದಲ್ಲಿ ಜೀವದಾಯಕ ವೃಕ್ಷವು ಮಾತ್ರ ಇರುತ್ತದೆ (ಪ್ರಕಟನೆ 22:2). ದೇವರು ಹವ್ವಳನ್ನು ಸೃಷ್ಟಿಸಿದಾಗ ಆಕೆಯು ಗಂಡನಿಗಿಂತ ಕೀಳಾಗಿಯೂ ಇಲ್ಲವೇ ಮೇಲಾಗಿಯೂ ಇರಬಾರದು ಆದರೆ ಎಲ್ಲಾ ವಿಷಯಗಳಲ್ಲೂ ಆಕೆಯು ಗಂಡನಿಗೆ ಸಮಾನಳಾಗಿರಬೇಕೆಂದು ಉದ್ದೇಶ ಹೊಂದಿದ್ದನು. ಈ ಪವಿತ್ರ ದಂಪತಿಗಳು ಪರಸ್ಪರ ಅವಲಂಬನೆ ಹೊಂದಿದ್ದರು. ಆದಾಗ್ಯೂ ಈರ್ವರಲ್ಲಿ ಆಲೋಚಿಸುವುದರಲ್ಲಿ ಮತ್ತು ಕ್ರಿಯೆಯಲ್ಲೂ ಅವರದೆ ಆದ ವ್ಯಕ್ತಿತ್ವವನ್ನು (ತಮ್ಮತನವು) ಹೊಂದಿದ್ದರು.

ಹವ್ವಳು ಪಾಪ ಮಾಡಿದಾಗ ದೇವರ ಆಜ್ಞೆಯನ್ನು ಉಲ್ಲಂಘಿಸಿದವರಲ್ಲಿ ಪ್ರಥಮಳಾದಳು. ಆದುದರಿಂದ ನೀನು ನಿನ್ನ ಗಂಡನಿಗೆ ಅಧೀನಳಾಗಿರಬೇಕೆಂದು ಕರ್ತನು ಅವಳಿಗೆ ಹೇಳಿದನು. ಹವ್ವಳ ಶಾಪದ ಭಾಗವಾಗಿ ತನ್ನ ಗಂಡನಿಗೆ ಒಳಪಟ್ಟು ನಡೆಯಬೇಕಾಯ್ತು. ಬಹಳ ಸಂದರ್ಭಗಳಲ್ಲಿ ಈ ಶಾಪವು ಅನೇಕ ಸ್ತ್ರೀಯರ ಜೀವನವನ್ನು ಶೋಷಣೆಯಿಂದ ಘೋರವನ್ನಾಗಿಸಿದೆ. ದೇವರು ಕೊಟ್ಟ ಮೇಲರಿಮೆಯನ್ನು ಗಂಡಸು ದುರುಪಯೋಗಿಸಿಕೊಂಡು ನಿರಂಕುಶ ಅಧಿಕಾರವನ್ನು ಚಲಾಯಿಸುತ್ತಾನೆ. ಅನಂತ ಜ್ಞಾನಿಯಾದ ದೇವರು ವಿಮೋಚನೆಯ ಯೋಜನೆಯನ್ನು ಯೋಜಿಸಿದ್ದಾನೆ. ಮನುಷ್ಯನಿಗೆ ಎರಡನೆಯ ಅವಕಾಶವನ್ನು ಕೊಟ್ಟು ತನ್ನನ್ನು ತಾನು ಪರೀಕ್ಷಿಸಿಕೊಂಡು ಯೋಗ್ಯನಾಗಿ ಮಾಡಿಕೊಳ್ಳುವುದಕ್ಕೆ ಎರಡನೆಯ ಅವಕಾಶವನ್ನು ಒದಗಿಸುತ್ತಾನೆ" ಎಲೆನ್ ಜಿ ವೈಟಮ್ಮನವರ ಟೆಸ್ಟಿಮೊನೀಸ್ ಫಾರ್ ದಿ ಚರ್ಚ್, ಸಂಪುಟ 3, ಪುಟ 484.

## ಚರ್ಚಿಸಬೇಕಾದ ಪ್ರಶ್ನೆಗಳು

1. ದೇವರು ಏದೇನ್ ತೋಟದಲ್ಲಿ ಆದಾಮನನ್ನು ಎದುರುಗೊಂಡು ಆತನು ಮಾಡಿದ ತಪ್ಪನ್ನು ಒಪ್ಪಿಕೊಳ್ಳುವಂತೆ ಮಾಡಲು ಮತ್ತು ಆತನನ್ನು ಪಶ್ಚಾತ್ತಾಪಕ್ಕೆ ನಡೆಸಲು ಪ್ರಶ್ನೆಗಳನ್ನು ಕೇಳಿದನು. ಇದೇ ಉದ್ದೇಶದಿಂದ ಕಾಯಿನನಿಗೂ ಪ್ರಶ್ನೆ ಮಾಡಿದನು (ಆ.ಕಾಂಡ 4:9,10), ಜಲಪ್ರಳಯ (ಆ.ಕಾಂಡ 6:5–8), ಬಬೆಲ್ ಗೋಪುರ (ಆ.ಕಾಂಡ 11:5) ಮತ್ತು ಸೋದೋಮ್ ಗೋಪುರ (ಆ.ಕಾಂಡ 18:21) ಈ ಎಲ್ಲಾ ಪ್ರಕರಣಗಳಲ್ಲಿ ತನಿಹಾಯುಕ್ತ ನ್ಯಾಯ ವಿಚಾರಣೆಯ ಆಲೋಚನೆಯು ಹೇಗೆ ಪ್ರಕಟಗೊಂಡಿದೆ?
2. ಒಳ್ಳೇದರ ಮತ್ತು ಕೆಟ್ಟದರ ಅರಿವನ್ನು ಕೊಡುವ ಮರದ ಹಣ್ಣನ್ನು ತಿಂದರೆ ತನಗೆ ಜ್ಞಾನ ಬರುತ್ತದೆ ಎಂದು ಹವ್ವಳು ಆಲೋಚಿಸಿದಳು ಯಾಕೆ? ದೇವರು ನಮಗೆ ಕೊಡುವುದಕ್ಕಿಂತ ಉತ್ತಮವಾದುದನ್ನು ಹೊಂದಿಕೊಳ್ಳುವ ನಿರೀಕ್ಷೆಯಿಂದ ದೇವರ ಮಾತನ್ನು ಮೀರಿ ನಡೆಯುವ ಇಂತಹ ತಪ್ಪುಗಳನ್ನು ಮಾಡುವ ಸಂದರ್ಭಗಳನ್ನು ಹೇಗೆ ನಾವು ತಪ್ಪಿಸಬಹುದು?